ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 60-67.
©*IIMRD*, Mysuru
IIMRD JOURNALS
www.iimrd.com

# ಪೆರಿಯಾರ್, ನಾರಾಯಣ ಗುರು ಮತ್ತು ಅಂಬೇಡ್ಕರ್ ಚಿಂತನೆಗಳ ತೌಲನಿಕ ಅಧ್ಯಯನ

**ಶಿವುಕುಮಾರ. ಎಂ***
*ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***ಸಾರಾಂಶ:* (Abstract)**

*ಚಳವಳಿಗಳು ಒಂದು ಜೀವಂತ ಸಮಾಜದ ಲಕ್ಷಣ. ಹಾಗಿದ್ದೂ ಚಳವಳಿಗಳು ಯಾವತ್ತೂ ಭಿನ್ನ ಭಿನ್ನ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುತ್ತವೆ. ಅವುಗಳಲ್ಲಿ ಒಂದೆಡೆ ಶೋಷಕ ಪ್ರಭುತ್ವದ ಜನವಿರೋಧಿ ನಿಲುವಿಗೆ, ಶೋಷಿತ ಪ್ರಜೆಗಳಿಂದ ಪ್ರತಿಭಟನೆಯ ಧ್ವನಿಯಾಗಿ ಬರುವ ಚಳವಳಿಗಳಿವೆ. ಇನ್ನೊಂದೆಡೆ ಪ್ರಭುತ್ವವೇ ತಮ್ಮ ಭದ್ರತೆಗಾಗಿ ಹರಿಬಿಡುವ ಚಳವಳಿಗಳಿವೆ. ಇವಲ್ಲದೆ, ಎರಡಕ್ಕೂ ಭಿನ್ನವಾಗಿ ಪ್ರಭುತ್ವ ಮತ್ತು ಪ್ರಜೆಗಳ ನಡುವೆ ಇಕ್ಕೆಲದಲ್ಲೂ ಹೊಕ್ಕಾಡುತ್ತಾ; ತಮ್ಮ ಬೇಳೆ ಬೇಯಿಸಿಕೊಳ್ಳುವ ದಲ್ಲಾಳಿಗಳ ಅಣಕು ಚಳವಳಿಗಳೂ ಇವೆ. ಅದೇನೆ ಇರಲಿ, ಇಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಈ ಮೇಲಿನ ಶಿರ್ಷಿಕೆಯಂತೆ ಇಲ್ಲಿ ತೌಲನಿಕ ಅಧ್ಯಯನವನ್ನು ಮಾಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.*

***ಮುಖ್ಯಪದಗಳು* (Keywords):** *ಪೆರಿಯಾರ್, ನಾರಾಯಣ ಗುರು, ಅಂಬೇಡ್ಕರ್, ಸಾಮಾಜಿಕ ಚಳುವಳಿ.*

**ಪೀಠಿಕೆ**

ಯಾವುದು ಜನಪರ, ಯಾವುದು ಜನವಿರೋಧಿ ಚಳವಳಿ ಎಂದು ತಿಳಿಯುವ ಹೊಣೆಗಾರಿಕೆ ಎಲ್ಲರದ್ದೂ ಹೌದು. ಈ ಹಿನ್ನೆಲೆಯಲ್ಲಿ 1888 ರಿಂದ ನಾರಾಯಣ ಗುರುಗಳು ಕಟ್ಟಿಕೊಂಡ 'ದೇವಾಲಯ ಕೇಂದ್ರಿತ' ಚಳವಳಿ ಅರವಿಪುರದ ಶಿವಾಲಯದಿಂದ ಆರಂಭವಾಗಿ; 1928ರಲ್ಲಿ 'ಕಲವನಗೋಡ್' ದೇವಾಲಯದ ಒಂದರ ಗರ್ಭಗುಡಿಯಲ್ಲಿ 'ಕನ್ನಡಿ ಪ್ರತಿಷ್ಠೆ' ಮಾಡುವುದರೊಡನೆ; ಅವರ ನಾಲ್ಕು ದಶಕಗಳ ಚಳವಳಿ ಹೊಸ ದಾರಿಯತ್ತ ಮುಖ ಮಾಡುತ್ತದೆ. ಇದರ ನಡುವೆ ನಾರಾಯಣ ಗುರುಗಳು 1924ರಲ್ಲಿ; ಕೇರಳದ ಅಳ್ವಾಯಿಯ ತನ್ನ ಅದ್ವೈತಾಶ್ರಮದಲ್ಲಿ ಒಂದು ಸರ್ವಧರ್ಮ ಸಮ್ಮೇಳನವನ್ನು ಆಯೋಜಿದ್ದರು. ಅದರ ಘೋಷವಾಕ್ಯವಾಗಿ ವೇದಿಕೆಯಲ್ಲಿ "ಪರಸ್ಪರ ಅರಿತುಕೊಳ್ಳಲು, ವಾದದಿಂದ ಇನ್ನೊಬ್ಬರನ್ನು ಸೋಲಿಸಲಿಕ್ಕಲ್ಲ" ಎಂಬ ಬ್ಯಾನರ್ ಹಾಕಿಸಿದ್ದರು. ಈ ಸಮ್ಮೇಳನದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಪಾರ್ಸಿ, ಜೈನ, ಯಹೂದಿ ಮೊದಲಾದ ವಿವಿಧ ಮತಧರ್ಮಗಳ ವಿದ್ವಾಂಸರು ಭಾಗವಹಿಸಿದ್ದರಲ್ಲದೆ, ಮಾನವೀಯತೆಯನ್ನು ಬಲಿಕೊಡದೆ ಮಾನವ ಘನತೆಯನ್ನು ಉಳಿಸಿ ಬೆಳೆಸುವ ಚಿಂತನೆ ಇಲ್ಲಿ ನಡೆಯಿತು. ಪ್ರಾಯಶಃ ಭಾರತದಲ್ಲಿ ಕೋಮು ಸಂಘರ್ಷದ ನಿವಾರಣೆಗಾಗಿ ರಾಜಕೀಯೇತರ ನೆಲೆಯಿಂದ ನಡೆದ

***Please cite this article as:*** ಶಿವುಕುಮಾರ. ಎಂ. (2022). ಪೆರಿಯಾರ್, ನಾರಾಯಣ ಗುರು ಮತ್ತು ಅಂಬೇಡ್ಕರ್ ಚಿಂತನೆಗಳ ತೌಲನಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 60–67.*

ಮೊದಲ ಪ್ರಯತ್ನ ಇದೇ ಆಗಿದ್ದಿರಬೇಕು. ಜೊತೆಗೆ ಇದರಲ್ಲಿ ನಡೆದ ಸಂವಾದದಲ್ಲಿ "ಆತ್ಮವಿಶ್ವಾಸವನ್ನು ಉಳಿಸಿಕೊಂಡು ಮಿಕ್ಕೆಲ್ಲವನ್ನೂ ಕಳಕೊಂಡರೂ ಚಿಂತಿಲ್ಲ. ಏಕೆಂದರೆ ಆತ್ಮವಿಶ್ವಾಸದ ಬಲದಿಂದ ಮಿಕ್ಕೆಲ್ಲವನ್ನೂ ಸಂಪಾದಿಸಬಹುದು" ಎಂದ ನಾರಾಯಣಗುರುಗಳ ನುಡಿ ಇಂದಿಗೂ ನಮ್ಮ ಗಮನಸೆಳೆಯುತ್ತಿದೆ. ಮಾತ್ರವಲ್ಲ "ಯಾರೇ ಆಗಲಿ ಅವರವರಿಗೆ ಸರಿಕಂಡ ಮತವನ್ನು ಸ್ವೀಕರಿಸಬಹುದು. ಅದರಲ್ಲೇನಿದೆ. ಆದರೆ ನೆನಪಿರಲಿ, ಮತಾಂತರ ಎನ್ನುವುದು ಅವರವರ ಅಂತರಂಗದ ಕರೆಯಾಗಿರಬೇಕು'. 'ಅದೆಂದೂ ಯಾವುದೇ ಆಮಿಷಕ್ಕೆ ಬಲಿಯಾಗಿ ಬಿರಿಯುವ ಪ್ರಕ್ರಿಯೆಯಾಗಬಾರದು" ಎಂದು ಮತಾಂತರದ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ತಳೆದವರು ನಾರಾಯಣ ಗುರುಗಳು. ಹಾಗಾಗಿಯೇ ಅವರ ಪ್ರಿಯ ಶಿಷ್ಯಂದಿರಾದ ಸಹೋದರ ಅಯ್ಯಪ್ಪನ್ ಬೌದ್ಧ ಧರ್ಮ ಸ್ವೀಕರಿಸಿದಾಗಲೂ ಅವರ ನಡುವಿನ ಆತ್ಮೀಯತೆಗೆ ಕುಂದುಂಟಾಗಲಿಲ್ಲ. ಅಷ್ಟೇ ಏಕೆ, ನಾರಾಯಣ ಗುರುಗಳ ಇನ್ನೊರ್ವ ಪ್ರಜ್ಞಾವಂತ ಶಿಷ್ಯ "ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ" ಇದರ ಲೇಖಕ ಸ್ವಾಮಿ ಧರ್ಮತೀರ್ಥರು ಕ್ರೈಸ್ತ ಮತವನ್ನು ಸ್ವೀಕರಿಸಿ ಫಾದರ್ ಜೋನ್ ಆದದ್ದನ್ನು ನೋಡಲು ಅವರಿಲ್ಲವಾದರೂ, ಅದರ ಹಿನ್ನೆಲೆಯಲ್ಲಿ ಅವರ ತಾತ್ವಿಕತೆ ತುಡಿದಿರಬೇಕು ಎಂದು ಅನಿಸದೆ ಇರದು.

ನಾರಾಯಣ ಗುರುಗಳು ತಮ್ಮ 32ನೆಯ ವಯಸ್ಸಿನಲ್ಲಿ ಸರ್ವರಿಗೂ ಪ್ರವೇಶವಿರುವ ದೇವಾಲಯ ಒಂದನ್ನು ಕಟ್ಟಿ ಜನಪರ ಕ್ರಾಂತಿಯ ಕಹಳೆ ಊದಿದರು. ಅದೇ ರೀತಿ ಪೆರಿಯಾರ್ ತನ್ನ 35ನೆಯ ವಯಸ್ಸಿನಲ್ಲಿ ಅಂದರೆ 1904ರಲ್ಲಿ "ವಿವಾಹ ಸಂದರ್ಭದಲ್ಲಿ ವರ–ವಧುವಿನ ಕೊರಳಿಗೆ ಕಟ್ಟುವ ಮಂಗಳಸೂತ್ರವೇ ಸ್ತ್ರೀಯರ ಅಧಃಪತನದ ಪ್ರತೀಕ. ಅಷ್ಟೇಯೇಕೆ, ಅದು ಸ್ತ್ರೀಯರ ಗುಲಾಮೀಕರಣದ ಮರು ದೃಢೀಕರಣ" ಎಂದು ಹೇಳುತ್ತಾ ತನ್ನ ಪತ್ನಿಯ ಮಂಗಳಸೂತ್ರವನ್ನೆ ಕಿತ್ತೆಸೆಯಲು ಆಕೆಯ ಕೊರಳಿಗೆ ಕೈಯಿಕ್ಕಿದಾಗ; ಅದನ್ನು ಅವರ ತಂದೆ ತಡೆಯುತ್ತಾರೆ. ಮನೆಮಂದಿಯೆಲ್ಲರೂ ಇದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಆದರೆ ಅಂದು ಅವರ ಪತ್ನಿ ನಾಗಮ್ಮ ಮಾತ್ರ ಮೌನಿಯಾಗುತ್ತಾರೆ.

ಸದಾ ಹೋಮ–ನೇಮ, ದಾನ–ಧರ್ಮಗಳಿಂದ ಗಿಜಿಗುಟ್ಟುತ್ತಿದ್ದ ಮನೆ ಪೆರಿಯಾರರದ್ದು. ಈ ಮನೆಯಲ್ಲಿ ಅದಾಗಲೇ ಯಾರ ಮಾತಿಗೂ ಸೊಪ್ಪು ಹಾಕದೆ ಪೆರಿಯಾರ್ ತಮ್ಮ ಅಣ್ಣನ ಮಗಳು ಬಾಲ್ಯದಲ್ಲೇ ವಿಧವೆಯಾದಾಗ ಆಕೆಗೆ ಮರುಮದುವೆ ಮಾಡಿಸಿದ್ದರು. ಹಾಗಾಗಿ ಅವರ ಮನೆಯಲ್ಲೇ ಅವರ ಮೇಲೆ ಸಂಪ್ರದಾಯಸ್ಥರ ಸಿಟ್ಟು ಅದಾಗಲೇ ಉಗಿಯಾಡುತ್ತಲೇ ಇತ್ತು. ಈಗ ಮನೆಯ ಸೊಸೆಯ ಮಂಗಳಸೂತ್ರವನ್ನೇ ತೆಗೆಯುವ ವಿಚಾರ ಮಾತ್ರ ಆಗರ್ಭ ಶ್ರೀಮಂತರಾದ ಅವರ ತಂದೆ ಸಹಿಸುವುದಾದರೂ ಹೇಗೆ? ಈ ಘರ್ಷಣೆಯೇ ಪೆರಿಯಾರರ ಗೃಹತ್ಯಾಗಕ್ಕೆ ಒಮ್ಮೆ ನಿಮಿತ್ತವಾಯಿತು. ಇಲ್ಲಿ ಪೆರಿಯಾರ್ ಅವರ ತಾತ್ವಿಕ ನಿಲುವು ಸಮರ್ಥನೀಯವಾದರೂ; ತಮ್ಮ ಮಡದಿಯನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ದುಡುಕಿದ್ದು ಮಾತ್ರ ಸಮರ್ಥನೀಯ ಎಂದು ಅನಿಸುವುದೇ ಇಲ್ಲ. ಮತ್ತೊಂದು ಸಂಗತಿಯಲ್ಲಿ ಮಗದೊಮ್ಮೆ 1925ರಲ್ಲಿ ಪೆರಿಯಾರ್ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆಯಿತ್ತು ಬಂದ ಸಂಕ್ರಮಣ ಕಾಲದ ಗತಿ ವಿಧಿಗಳು ಭಾರತದ ರಾಜಕೀಯದಲ್ಲಿ "ಪ್ರಾದೇಶಿಕ–ಆಶೋತ್ತರ" ಮತ್ತು "ಪ್ರಾದೇಶಿಕ–ಪಕ್ಷ" ಎನ್ನುವುದರ ಔಚಿತ್ಯದ ಬಗೆಗೆ ಹೊಸ ದಿಶೆಯನ್ನೇ ನೀಡಿದ್ದು ಈಗ ಇತಿಹಾಸ. ಹಾಗೆ ನೋಡಿದರೆ ಪೆರಿಯಾರ್ ಅವರ ಜನಪರ ನಿಲುವು ಕಾಂಗ್ರೆಸ್ ಸೇರುವ ಮೊದಲೆ ಸ್ಪಷ್ಟವಾಗಿತ್ತು. ಅವರು 1917ರಲ್ಲಿ

ಈರೋಡಿನ ನಗರಾಧ್ಯಕ್ಷರಾಗಿ, ಗೌರವ ಮ್ಯಾಜಿಸ್ಟ್ರೇಟರಾಗಿ ನಡೆಸಿದ ನೆಲಮೂಲದ ಚಿಂತನೆಗಳು ಸದಾ ಶ್ರಮಿಕರ ಪರವಾಗಿಯೇ ಇತ್ತು. ಪೆರಿಯಾರ್ 1921ರಲ್ಲಿ ಗಾಂಧಿ ಯುಗದಲ್ಲಿ ಕಾಂಗ್ರೆಸ್ ಸೇರಿ ಅಲ್ಲೂ ತಾವಿದ್ದಷ್ಟು ಕಾಲ ಹೊಸ ಸಂಚಲನೆಯನ್ನು ಉಂಟು ಮಾಡಿದ್ದರು. ತಾನು ಕಾಂಗ್ರೇಸ್ ಸೇರುವ ಮುಂಚೆನೇ ಸುಮಾರು 29 ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿದ್ದವರು ಪೆರಿಯಾರರು ಎನ್ನುವುದು ನೆನಪಿರಲಿ. ಹಾಗಿದ್ದೂ, ರಾಷ್ಟ್ರೀಯ ಚಳವಳಿಗೆ ಧುಮುಕುವ ಮುನ್ನ ಅವೆಲ್ಲ ಸ್ಥಾನಕ್ಕೂ ರಾಜೀನಾಮೆ ನೀಡಿ; ತನ್ನ ರಾಜಕೀಯ ಬದ್ಧತೆಗೆ ಇರಬೇಕಾದ ಸಿದ್ಧತೆ ಮತ್ತು ಶಿಷ್ಟತೆಗಳಿಗೆ ಹೊಸ ಎಚ್ಚರವನ್ನು ನೀಡಿದವರು. ಹಾಗಾಗಿಯೇ ಪೆರಿಯಾರ್ ತಾನಿದ್ದಷ್ಟು ಕಾಲ ಕಾಂಗ್ರೆಸ್ ಪಕ್ಷದೊಳಗಿದ್ದ 'ಜಾತಿವಾದದ ಪುರಸ್ಕಾರ' ಮತ್ತು 'ಬಂಡವಾಳಶಾಹಿಯ ಸಂಸ್ಕಾರ' ಎರಡಕ್ಕೂ ಸಿಡಿಯುತ್ತಲೇ ಮುನ್ನಡೆಯಬೇಕಾಯಿತು. ಇದಕ್ಕೊಂದು ನಿದರ್ಶನ ತಿರುನೇಲವೆಲ್ಲಿ "ಶರ್ಮಾದೇವಿ ಗುರುಕುಲ" ಎನ್ನುವ ಹಗರಣ ಮತ್ತು ಅದರ ಬಗ್ಗೆ ಕಾಂಗ್ರೆಸ್ ಮತ್ತು ಪೆರಿಯಾರ್ ತಳೆದ ವಿರುದ್ಧ ನಿಲುವುಗಳಿಂದಾಗಿ 'ಈ ಬ್ರಾಹ್ಮಣರ ಕಾಂಗ್ರೆಸನ್ನು ನಾನು ತಮಿಳುನಾಡಿನಲ್ಲಿ ನಿರ್ನಾಮ ಮಾಡುತ್ತೇನೆ' ಎಂಬ ಪೆರಿಯಾರ್ ಗುಡುಗು ಇಂದಿಗೂ ಕಾಂಗ್ರೆಸಿಗರ ಎದೆಯಲ್ಲಿ ನಡುಕ ಹುಟ್ಟಿಸುತ್ತಲೇ ಇದೆ. ಅಂದು ಶ್ರೀಮಾನ್ ಐಯ್ಯರ್ ಎನ್ನುವವರೊಬ್ಬರು ನಡೆಸುತ್ತಿದ್ದ ಶರ್ಮಾದೇವಿ ಗುರುಕುಲಕ್ಕೆ ಮದ್ರಾಸ್ ಪ್ರಾದೇಶಿಕ ಕಾಂಗ್ರೆಸ್ಸಿನ ಕಾರ್ಯಕಾರಿಣಿಯ ಅನುಮತಿಯಿಲ್ಲದೆ ರೂಪಾಯಿ 10,000/– ನೀಡುವ ಸಂಚನ್ನು ಕಾರ್ಯಕಾರಿಣಿಯ ಬ್ರಾಹ್ಮಣ ಪದಾಧಿಕಾರಿಗಳು ನಡೆಸಿದ್ದರು. ಅದಾಗಲೇ ಗುರುಕುಲಕ್ಕೆ ರೂ. 5,000/– ನೀಡಿಯೂ ಆಗಿತ್ತು. ಇದನ್ನು ಪ್ರತಿಭಟಿಸಿ ಈ ಗುರುಕುಲದ ಗತಿವಿಧಿಗಳೇನು ಎನ್ನುವುದನ್ನು ತಿಳಿಯಲು ಪೆರಿಯಾರ್ ಮತ್ತು ಡಾ.ವರ್ದರಾಜುಲು ಮನವಿ ಮಾಡಿದರು. ಆಗ ಅವರಿಗೆ ತಿಳಿಯಿತು, ಇದು ಹೆಸರಿಗಷ್ಟೇ ಜಾತ್ಯತೀತ ಗುರುಕುಲ ಎನ್ನುವುದು. ಇಲ್ಲಿ ಬ್ರಾಹ್ಮಣೇತರರಿಗೆ ಪ್ರವೇಶ ಮತ್ತು ಪ್ರಾಶಸ್ತ್ಯ ಯಾವತ್ತೂ ಇರಲೇ ಇಲ್ಲ. ಅಪ್ಪಿತಪ್ಪಿ ಯಾರಾದರೂ ಶೂದ್ರರು ಬಂದರೂ ಕೂಡಾ ಅವರಿಗೆ ಎಲ್ಲರೂ ಉಂಡು ಮಿಕ್ಕಿದನ್ನ ಮತ್ತು ಎಂಜಲನ್ನವೇ ಗತಿ! ಒಟ್ಟಿನಲ್ಲಿ ಇಲ್ಲಿ ವೈದಿಕರ ಅಗ್ರಹಾರ ನೀತಿಯೇ ಚಲಾವಣೆಯಲ್ಲಿತ್ತು. ಪುನರಪಿ ಇದೇ ಗುರುಕುಲಕ್ಕೆ 5,000 ಸಾವಿರ ರೂಪಾಯಿ ಪಾವತಿಯಾದದ್ದು ಈ ನೀತಿಬಾಹಿರ ಘಟನೆಯಿಂದಾಗಿಯೇ ಪೆರಿಯಾರ್ ಅವರ "ಸ್ವಾಭಿಮಾನ ಚಳವಳಿ" ಬಿಜಾಂಕುರವಾಗುತ್ತದೆ. ಅಲ್ಲಿಂದಲೇ 'ಸಾಮಾಜಿಕ ಸಮತೆ ಮತ್ತು ಸಮಾಜವಾದ ಎರಡೂ ನಮ್ಮಿಂದಿನ ತುರ್ತು ಅನಿವಾರ್ಯತೆ' ಎನ್ನುವ ನವಗರ್ಜನೆ ಪೆರಿಯಾರರಿಂದ ಮೊಳಗುತ್ತದೆ. ಅದಾಗಲೇ ಮದ್ರಾಸಿನಲ್ಲಿ ಶೂದ್ರರ ಹಿತರಕ್ಷಣೆಯ ಪೋಸ್ ನೀಡುತ್ತಾ 'ಜಮೀನ್ದಾರರ' ಮತ್ತು 'ಧನಿಕರ' ಗುಪ್ತಗಾಮಿ ಚಿಂತನೆಯಲ್ಲೇ ರಾಜಕೀಯ ಅಂಗಳದಲ್ಲಿ ಹೊರಲಾಡುತ್ತಾ ಎಡೆಬಿಡಂಗಿ ಪಕ್ಷವೊಂದಿತ್ತು. ಅದರ ಹೆಸರು "ಜಸ್ಟಿಸ್ ಪಾರ್ಟಿ". ಅದರ ಅಪ್ರಾಮಾಣಿಕ ಶೂದ್ರ ರಾಜಕೀಯದಿಂದಲೇ ಅದು 1937ರ ಚುಣಾವಣೆಯಲ್ಲಿ ಸ್ಪರ್ಧಿಸಿಯೂ ನೆಲಕಚ್ಚಿತ್ತು. ಅದರಿಂದಾಗಿ ಆಗ ಸೆರೆಮನೆಯಲ್ಲಿದ್ದ ಪೆರಿಯಾರ್ ಅವರ ಮನವೊಲಿಸಿ; 1937ರ ಪಾರ್ಟಿಯ ಅಧಿವೇಶನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಒಪ್ಪಿಸಲಾಯಿತು. ಅವರ ಅನುಪಸ್ಥಿತಿಯಲ್ಲಿ ಅವರು ಬರೆದ ಭಾಷಣವನ್ನು ಎ.ಟಿ.ಪನ್ನೀರಸೆಲವನ್ ಓದಿ ಹೇಳಿದಾಗ ಅಲ್ಲಿ ಸೇರಿದವರಲ್ಲಿ ಹೊಸ ಸಂಚಲನೆ ಉಂಟಾಯಿತು. ಹೀಗೆ ಪೆರಿಯಾರ ಅಧ್ಯಕ್ಷತೆಯಲ್ಲಿ ಜಸ್ಟೀಸ್ ಪಾರ್ಟಿ ನಮ್ಮ ದೇಶದ ಸಾಮಾಜಿಕ–ರಾಜಕೀಯ ಇತಿಹಾಸದಲ್ಲಿ ನವಯುಗವೊಂದನ್ನು ಉದ್ಘಾಟಿಸಿತು. ಇದು ಮುಂದೆ "ಸೌತ್ ಇಂಡಿಯನ್

ಫೆಡರೇಶನ್" ಆಗಿ; ಪುನರಪಿ "ಜಸ್ಟಿಸ್ ಪಾರ್ಟಿ" ಆಗಿ; 1944ರಲ್ಲಿ "ದ್ರಾವಿಡ ಕಳಗಂ" ಎನ್ನುವ ನಾಮಾಂತರಿತ ಹೊಸ ಹುಟ್ಟು ಪಡೆಯಿತು.

ಅಲ್ಲಿಂದ ಮುಂದೆ ಈ ಪಕ್ಷ; ಪೆರಿಯಾರರ ಪ್ರಿಯ ಶಿಷ್ಯ ಸಿ.ಎನ್. ಅಣ್ಣಾದೊರೈ ಅವರ ನೇತೃತ್ವದಲ್ಲಿ ಪೆರಿಯಾರರ ಜನ್ಮದಿನದಂದೇ; 1941ರಲ್ಲಿ ಕವಲೊಡೆದು "ದ್ರಾವಿಡ ಮುನ್ನೇತ್ರ ಕಳಗಂ" ಎಂಬ ಇನ್ನೊಂದು ಪಕ್ಷಕ್ಕೆ ಮುನ್ನುಡಿ ಬರೆಯಿತು. ಈ ಬೆಳವಣಿಗೆ ಅಣ್ಣಾದೊರೈ ಅವರಿಗೆ ಮುಖ್ಯಮಂತ್ರಿಯ ಗಾದಿಯೇರಲು ಮೆಟ್ಟಿಲಾಯಿತು. ಹೀಗೆ 1904ರಿಂದ 1973 ಅವಧಿಯ ಸುಮಾರು 70 ವರ್ಷಗಳ "ಪೆರಿಯಾರ್ ಪ್ರೇರಿತ" ಸ್ವಾಭಿಮಾನ ಚಳವಳಿ; ತಮ್ಮ ಮುಂದೆ ಇದ್ದದ್ದನ್ನು 'ಕೆಡವುದರಿಂದ' ಪ್ರಾರಂಭವಾದರೆ; ನಾರಾಯಣಗುರುಗಳ ಚಳವಳಿ ತಮ್ಮ ಮುಂದೆ ಇದ್ದದನ್ನು ಕೆಡಹದೆ ಪರ್ಯಾಯಗಳನ್ನು ಕಟ್ಟುತ್ತಾ ಮುನ್ನಡೆಯಿತು. ಈಗ ಇವೆರಡೂ ಸಾಮಾಜಿಕ ಚಳವಳಿಗಳ ಮಾದರಿಗಳು ನಮ್ಮ ನಮ್ಮ ಮಮಕಾರದಲ್ಲಿ ಕುರುಡಾಗದೆ; ಮುಂದಿನ ಜನಪರ ಚಳವಳಿಗೆ ಎಚ್ಚರಿಕೆಯ ಗಂಟೆಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ಇವೆರಡು ಚಳವಳಿಗಳ ಕೆಲವು ಮೈಲುಗಲ್ಲುಗಳನ್ನು ಸ್ಥೂಲವಾಗಿ ಗಮನಿಬೇಕು.

(1) ದೇವರಿದ್ದಾನೆಯೇ?: ಒಂದೆಡೆ ಮಲಯಾಳಂ ಮನೆಮಾತಿನ ಅಪ್ಪಟ್ಟ ಆಸ್ತಿಕ ನಾರಾಯಣಗುರುಗಳು 1856ರಲ್ಲಿ ಹುಟ್ಟಿ 1928ರಲ್ಲಿ ಕಣ್ಣುಮುಚ್ಚಿದಾಗ ಅವರಿಗೆ 72 ವರ್ಷ ವಾಗಿತ್ತು. ಇನ್ನೊಂದೆಡೆ ಅಪ್ಪಟ ನಾಸ್ತಿಕನಾಗಿ ಪರಿವರ್ತನೆಗೊಂಡಿದ್ದ ಕನ್ನಡ ಮನೆಮಾತಿನ ಪೆರಿಯಾರ್ 1879ರಲ್ಲಿ ಹುಟ್ಟಿ 1973ರಲ್ಲಿ ಕಣ್ಮರೆಯಾದಾಗ ಅವರಿಗೆ 94 ವರ್ಷವಾಗಿತ್ತು. ಇಲ್ಲಿ ನೋಡಿ, ದೇವರನ್ನು ನಂಬಿ ಬದುಕು ರೂಪಿಸಿದ ನಾರಾಯಣಗುರುಗಳು 72 ವರ್ಷ ಮಾತ್ರ ಬದುಕಿದರೆ; ದೇವರ ಅಸ್ತಿತ್ವವನ್ನು ಧಿಕ್ಕರಿಸುತ್ತಲೇ ಬಂದ ಪೆರಿಯಾರ್ 94 ವರ್ಷ ಬದುಕಿದರಲ್ಲಾ! ಇದನ್ನು ಕಂಡಾಗಲೂ "ದೇವರಿ ದ್ದಾನೆಯೇ?" ಎಂಬ ಪ್ರಶ್ನೆ ನಾಸ್ತಿಕರನ್ನೂ ಬಿಡಿ ಆಸ್ತಿಕರನ್ನೂ ಕಾಡಿದರೆ ಅದು ಅವರಿಬ್ಬರ ತಪ್ಪೂ ಅಲ್ಲ. ಬೇರೆಯೇ ಮಾತಿನಲ್ಲಿ ಹೇಳಬೇಕಾದರೆ; ಇಂತಹ 'ಕಾಡುವಿಕೆ' ಎನ್ನುವುದೇ ಒಂದು ಜೀವಂತ ಸಮಾಜದ ಲಕ್ಷಣ ಕೂಡಾ ಹೌದು.

(2) **ತಾಯಿನುಡಿ–ಅನ್ನದನುಡಿ–ಅಧಿಕಾರದ ನುಡಿ–ಗಡಿನಾಡನುಡಿ:** ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆಯ ಶುಶಿಕ್ಷಿತರ ಮನೆಯೊಂದರಲ್ಲಿ; ಕೇರಳದ ಅಂದಿನ ತಿರುವನಂತಪುರ ಸಂಸ್ಥಾನಾಂತರ್ಗತ ಚೆಂಬಳಾಂತಿ ಯಲ್ಲಿ; "ಸಾಮಂತಶಾಹಿ" ವ್ಯವಸ್ಥೆಯ ನಡುವೆ ಅರಳಿದ ನಾರಾಯಣ ಗುರುಗಳು; ಮಲಯಾಳಂ, ತಮಿಳು, ಸಂಸ್ಕೃತ ಭಾಷೆಗಳಲ್ಲಿ ಕೃತಿ ರಚನೆಮಾಡಿದ ಓರ್ವ ಗಮನಾರ್ಹ ಕವಿ. ಮಾತ್ರವಲ್ಲ ಹತ್ತೊಂಬತ್ತನೆಯ ಶತಮಾನದ ಕೊನೆಯ ಚರಣದಿಂದ ಸಾಮಾಜಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಔದ್ಯಮಿಕ ರಂಗಗಳಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ಹೊಸ ಸಂಚಲನೆಯನ್ನು ಉಂಟುಮಾಡಿದ ಓರ್ವ ಕೃತಿಶೀಲ ಪಥಪ್ರದರ್ಶಕ. ವೈದಿಕ ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆದ ಮೊದಲ ಶೂದ್ರ ಎಂದು ಪತ್ರಕರ್ತ ಬರಹಗಾರ ದಿನೇಶ್ ಅಮೀನ್ ಮಟ್ಟು ಅವರು ಉಲ್ಲೇಖಿಸಿದ್ದನ್ನು ಇಲ್ಲಿ ನೆನೆಯಬೇಕಾಗುತ್ತದೆ. ಇನ್ನೊಂದೆಡೆ ಪಿತೃಪ್ರಧಾನ ಕೌಟುಂಬಿಕ ವ್ಯವಸ್ಥೆಯ ನಡುವೆ ಆಗರ್ಭ ಶ್ರೀಮಂತರ ಮನೆಯೊಂದರಲ್ಲಿ; ತಮಿಳುನಾಡಿನ ಈರೋಡಿ ನಲ್ಲಿ; ಬ್ರಿಟಿಷ್ 'ವಸಾಹತುಶಾಹಿ' ವ್ಯವಸ್ಥೆಯ ನಡುವೆ ಅರಳಿದ ಪೆರಿಯಾರ್ ಅವರು; ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಬಲ್ಲವರಾಗಿ ದ್ದರು. ಆದರೆ ಅವರ ವೈಚಾರಿಕ ಸಾಹಿತ್ಯ ಅಭಿವ್ಯಕ್ತವಾದದ್ದು ಮಾತ್ರ ತಮಿಳು ಭಾಷೆ ಯಲ್ಲಿ. ಪೆರಿಯಾರ್ ಅವರಿಗೆ ತನ್ನ ತಾಯಿನುಡಿ ಕನ್ನಡಕ್ಕಿಂತಲೂ ತನ್ನ ವಲಸಿತ

ನೆಲೆಯ ತಮಿಳು ಹೆಚ್ಚು ಆತ್ಮೀಯವಾಗಿತ್ತು ಎನ್ನುವುದು ಗುಟ್ಟಿನ ವಿಷಯವಂತೂ ಅಲ್ಲ. ಹಾಗೆ ನೋಡಿದರೆ ಪೆರಿಯಾರ್ ಅವರ ಶಾಲಾ ಶಿಕ್ಷಣ ನಡೆದದ್ದು ಕೇವಲ ಸರಿಸುಮಾರು 'ಐದು' ವರ್ಷ ಮಾತ್ರ. ಇದಕ್ಕೆ ಕಾರಣವಿಲ್ಲದೆಯೂ ಇಲ್ಲ.

ಅಂದಿನ ದಿನದಲ್ಲಿ ಶೂದ್ರಾತಿಶೂದ್ರರಿಗೆ ಬ್ರಾಹ್ಮಣ ಶಿಕ್ಷಕರು ಕೊಡುತ್ತಿದ್ದ ಶಿಕ್ಷೆಯ ಅಮಾನವೀಯತೆಗೆ ಶಾಲೆಯ ಕೊಠಡಿಯಲ್ಲೇ ಸಿಡಿದ ಸಿಡಿಲಮರಿಯೇ ಪೆರಿಯಾರ್. ಹೀಗೆ ಸಿಡಿಯುತ್ತಲೇ; ಶಾಲೆಯಿಂದ ಹೊರ ನಡೆದವರು ಪೆರಿಯಾರ್! ಹೀಗೆನ್ನುವಾಗ ಡಾ.ಅಂಬೇಡ್ಕರ್ ಮೇಲೆ ಬ್ರಾಹ್ಮಣ ಶಿಕ್ಷಕರೊಬ್ಬರು ತೋರಿದ ಪ್ರೀತಿಯನ್ನು ಅಲ್ಲಗಳೆಯಲಾಗದು. ಹಾಗಿದ್ದೂ ಇಂತ ಅಪವಾದವನ್ನುಳಿದು ಹೆಚ್ಚಿನೆಡೆ; ಅಂದಿನ ದಿನಗಳಲ್ಲಿ ಶಿಕ್ಷಕರು ಶೂದ್ರಾತಿಶೂದ್ರರನ್ನು ತಮ್ಮ 'ಪರಶುರಾಮಪ್ರಜ್ಞೆ' ಕೆಂಗಣ್ಣಿನಿಂದಲೇ ನಿಕೃಷ್ಟರಾಗಿ ನೋಡುತ್ತಿದ್ದರು ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಗಳು ಚರಿತ್ರೆಯಲ್ಲಿದೆ. ಅದೇನೇ ಇರಲಿ, ಪೆರಿಯಾರ್ ಓರ್ವ ಅಪ್ಪಟ್ಟ ಜನಪರ ಹೋರಾಟಗಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಇವೆಲ್ಲವನ್ನೂ ಗಮನಿಸುವಾಗ ನಮಗೆ ನಾರಾಯಣಗುರು ಮತ್ತು ಪೆರಿಯಾರ್ ಇಬ್ಬರಲ್ಲೂ ಗಡಿಭಾಷೆಗಳ ಕುರಿತು ಇದ್ದ ಒಲವು–ನಿಲುವುಗಳು ಒಂದು ಆರೋಗ್ಯಪೂರ್ಣ ಮಾದರಿಯಂತಿವೆ. ಹೌದು ಎಲ್ಲಿ ಮಾತೃಭಾಷೆಗೆ ಮನ್ನಣೆಯ ಮನೆಯಿಲ್ಲವೋ; ಎಲ್ಲಿ ಗಡಿಭಾಷೆಗಳು ಉಪೇಕ್ಷಿಸಲ್ಪಡುತ್ತದೋ ಅಲ್ಲಿ ನೆಲಮೂಲದ ಅಪಾರ ಜ್ಞಾನರಾಶಿಗಳು ಅನಾದರಣೆಗೆ ಒಳಗಾಗುತ್ತವೆ; ಕಾಲಾಂತರದಲ್ಲಿ ಅವು ನಷ್ಟವಾಗುತ್ತವೆ ಕೂಡಾ. ಇದರಿಂದಾಗಿ ಅಲ್ಲಿನ ಉತ್ಪಾದನಾ ಕ್ಷಮತೆಯ ಶ್ರಮಿಕರ ಬದುಕು ಕೀಳರಿಮೆಯಲ್ಲಿ ಮುದುಡುತ್ತದೆ. ಅಲ್ಲೇ ನಮಗೆ ನಮ್ಮ ಮುಂದೆ ತಲೆತಲಾಂತರದಿಂದ ನಡೆಯುತ್ತಲೇ ಬಂದ 'ಅನ್ನದನುಡಿ' ಮತ್ತು 'ಅಧಿಕಾರದನುಡಿ' ಎರಡರ ಅಣಕು ಜಂಗಿಕುಸ್ತಿಗಳ ಚಿತ್ರಣ ಕಣ್ಣಮುಂದೆ ಕಟ್ಟುತ್ತದೆ. ಇದರಿಂದಾಗಿ ನೆಲಮೂಲದ ವೈವಿಧ್ಯಮಯ ಸಾವಿರಾರು 'ತಾಯಿನುಡಿಗಳು' ಮತ್ತು 'ಮಾತೃಸಂಸ್ಕೃತಿಗಳು' ಪಟ್ಟ ಪಾಡು, ಇಂದಿಗೂ ಪಡುತ್ತಿರುವ ಸಂಕಟದ ಸರಮಾಲೆ ಗಳೇ ನಮ್ಮ ಕಣ್ಣಮುಂದೆ 'ಮಾಲೆ' ಕಟ್ಟುತ್ತವೆ. ಇದಕ್ಕೊಂದು ಸೂಕ್ತ ಉದಾಹರಣೆಯೇ ನಮ್ಮಿಂದಿನ ಭಾಷಾ ನೀತಿ. ಇಂದಿನ ನಮ್ಮ ಸರಕಾರಿ ಲೆಕ್ಕಾಚಾರದಲ್ಲೇ ಭಾರತದಲ್ಲಿ 1652 ಭಾಷೆಗಳಿವೆ. ನಿಜವಾಗಿಯೂ ಇದರ ಸಂಖ್ಯೆ ಇನ್ನೂ ಹೆಚ್ಚಿಗಿದೆ. ಅದಿರಲಿ. ಇಂದಿಗೂ ಭಾರತ ದಲ್ಲಿ ಇಂಗ್ಲಿಷ್ ಕಾನೂನಿನ ಭಾಷೆಯಾಗಿ, ಹಿಂದಿ ಸಂಪರ್ಕ ಭಾಷೆಯಾಗಿ ರಾದ್ಧಾಂತ ನಡೆಸುತ್ತಿದೆ. ಇದರ ಜೊತೆಗೆ ಶಾಸ್ತ್ರೀಯ ಭಾಷೆ, ಅಧಿಕೃತ– ರಾಜ್ಯಭಾಷೆ ಇತ್ಯಾದಿಗಳ ಪಟ್ಟಿ ಕೂಡಾ 30 ಭಾಷೆಗಳನ್ನು ಮೀರುವುದಿಲ್ಲ! ಆಗಲೇ ನಮಗೆ ಇದಾವ ನ್ಯಾಯ; ಏನನ್ಯಾಯ ಎಂಬ ಕುವೆಂಪು ಅವರ ಕವಿವಾಣಿ ನೆನಪಾಗುತ್ತದೆ. ಮಾತ್ರವಲ್ಲ, ಇಂಗ್ಲಿಷ್ ಕಲಿತವರ ಬೀಗುವಿಕೆಯನ್ನು ಕಂಡಾಗ ಹಕ್ಕಿ ಹಾರುತಿದೆ ನೋಡಿದಿರಾ ಎನ್ನುವ ಇನ್ನೊಂದು ಬೇಂದ್ರೆಯ ಕವಿವಾಣಿ ನಮ್ಮನ್ನು ಎಚ್ಚರಿಸುತ್ತಿದೆ. ಇದು ಯಾರ ತಪ್ಪು? ನಮ್ಮ ಸಂವಿಧಾನವೇ ಬಹು ಸಂಸ್ಕೃತಿಯ ನಾಡಿನ ಭಾಷಾ ನೀತಿಯನ್ನು ರೂಪಿಸುವಲ್ಲಿ ಎಡವಿದೆಯೇ? ಆದರೆ ನಮ್ಮ ಸಂವಿಧಾನದ ಅನುಚ್ಛೇದ 29–1ರಲ್ಲಿ ಭಾರತದ ರಾಜ್ಯ ಕ್ಷೇತ್ರವೇ ಇರಲಿ ಅಥವಾ ಇದರೊಳಗಿನ ಯಾವುದೇ ವಿಭಾಗವೇ ಇರಲಿ ಅವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ ಅದು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು ಎಂದು ಸ್ಪಷ್ಟವಾಗಿ ನಿರೂಪಿಸಿದೆಯಲ್ಲಾ. ಹೀಗಿದ್ದೂ ಇಲ್ಲಿ 'ಭಾಷೆ' ಎನ್ನುವುದು ಹೆಚ್ಚಿನ ಸಮುದಾಯಗಳಿಗೆ ಅಭಿಮಾನ ಸಂಕೇತ ವಾಗದೆ; ಅಪಮಾನಕ್ಕೂ,

ಕೀಳರಿಮೆಗೂ, ಅವಕಾಶ ಕಳೆದುಕೊಳ್ಳುವುದಕ್ಕೂ ಸಂಕೇತ ವಾಗುತ್ತಿರುವುದು ಅಲೋಚನಾರ್ಹವಾಗಿದೆ. ಇದನ್ನು ನೀಗಿಸುವ ಬಗೆಯೆಂತು? ಈ ಪ್ರಶ್ನೆಗೆ ಉತ್ತರ ಹುಡುಕಬೇಕಾದರೆ ನಾವು ನಾರಾಯಣ ಗುರುಗಳತ್ತಲೇ ಮುಖಮಾಡ ಬೇಕಾಗುತ್ತದೆ. ಅವರು ಬಹು ಹಿಂದೆಯೇ ತನ್ನ ತಾಯಿನುಡಿಯನ್ನು ಬಿಡದೆ, ರಾಜ್ಯದ ಅಧಿಕೃತ ನುಡಿಯನ್ನೂ ತಿರಸ್ಕರಿಸದೆ; ಅನ್ನದನುಡಿ ಮತ್ತು ಅಧಿಕಾರದನುಡಿ ಎರಡನ್ನೂ ಮರೆಯದೆ; ಬದುಕು ಕಟ್ಟುವ ಹೊಸ ಮಾದರಿಯನ್ನು ಕಟ್ಟಿ ಕೊಟ್ಟಿದ್ದರು. ಅದನ್ನು ತನ್ನ ವಿದ್ಯಾಯೋಜನೆಯಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದ್ದರು ಕೂಡಾ. ಅದಕ್ಕಾಗಿ ಅವರು ತನ್ನ ತಾಯಿನುಡಿ ಮಲಯಾಳಂನ್ನು ಧಿಕ್ಕರಿಸದೆ, ಅಂದಿನ ಅಧಿಕಾರದ ಭಾಷೆಯಾದ ಸಂಸ್ಕೃತ ಮತ್ತು ಅನ್ನದ ಭಾಷೆಯಾದ ಇಂಗ್ಲಿಷನ್ನು ತನ್ನ ಶಾಲೆಗಳಲ್ಲಿ ವ್ಯವಸ್ಥಿತವಾಗಿ ಕಲಿಸುವ ಮಾದರಿಯನ್ನು ಕಟ್ಟಿಕೊಟ್ಟರು. ಮಾತ್ರವಲ್ಲ, ತಾವೂ ಕೂಡಾ ತನ್ನೂರ ತಿರುವನಂತಪುರದ ಗಡಿಭಾಷೆಯಾದ 'ತಮಿಳು' ಭಾಷೆಯನ್ನು ಕಲಿತು; ತಮ್ಮ ಬಹುಭಾಷಾ ನೀತಿಗೆ 'ತಾವೇ' ಒಂದು ಉತ್ತಮ ಮಾದರಿಯಾದರು. ಇದು ಅವರೊಳಗಿನ ಭಾಷಾ ಪ್ರೇಮಕ್ಕೆ ಹಿಡಿದ ಕನ್ನಡಿಯಂತಿದೆ. ಹೀಗೆನ್ನುವಾಗ ನಮಗೆ ಧರ್ಮಸ್ಥಳದಲ್ಲಿ ನಡೆದ 51ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಭಾಷೆ ರಾಜಭವನದ ಹಿತ್ತಲಲ್ಲೂ; ಮುಖ್ಯಮಂತ್ರಿಯ ಕಚೇರಿಯಲ್ಲೂ ಬೆಳೆಯಲಾರದು' ಎಂದು ಡಾ.ಹಾ.ಮಾ. ನಾಯಕರು ಹೇಳಿದ ಮಾತು ಮತ್ತೆ ಮತ್ತೆ ನೆನಪಾಗುತ್ತದೆ. ಹೌದು. 'ಯಾವತ್ತೂ ಯಾವುದೇ ಭಾಷೆ ತಮ್ಮ ಸಮುದಾಯಗಳಲ್ಲಿ ಕೀಳರಿಮೆಗೆ ಒಳಗಾಗ ಬಾರದು' ಎಂದು ಬಗೆದವರು ನಾರಾಯಣ ಗುರುಗಳು. ಅದಕ್ಕೊಂದು ದೃಷ್ಟಾಂತ ನೋಡೋಣ: ಒಮ್ಮೆ 'ವೈಕಂ' ಸತ್ಯಾಗ್ರಹದ ಸಂದರ್ಭದಲ್ಲಿ ಶಿವಗಿರಿಗೆ ನಾರಾಯಣ ಗುರುಗಳನ್ನು ಭೇಟಿಯಾಗಲು ಬಂದರು ಮಹಾತ್ಮಾ ಗಾಂಧೀಜಿ. ಆಗ ಅವರು 'ಸ್ವಾಮೀಜಿಯವರಿಗೆ ಇಂಗ್ಲಿಷ್ ಬರುತ್ತದೆಯೇ' ಎಂದು ಸ್ವಲ್ಪ ಲಘುವಾಗಿ ನಾರಾಯಣ ಗುರುಗಳನ್ನು ಪ್ರಶ್ನಿಸಿದಾಗ ತಮಗೆ ಸಂಸ್ಕೃತ ಬರುತ್ತದೆಯೇ ಎಂದು ಗಾಂಧೀಜಿಗೇನೇ ಮರುಪ್ರಶ್ನೆ ಹಾಕಿ ಅವರನ್ನು ನಿರುತ್ತರಗೊಳಿಸಿದ್ದನ್ನು ಮರೆಯುವುದೆಂತು, ತಮಿಳುನಾಡಿನಲ್ಲಿ 'ಸೆಲ್ಫ್– ರೆಸ್ಪೆಕ್ಟ್' ಚಳವಳಿ ಮತ್ತು 'ದ್ರಾವಿಡ ಕಳಗಮ್' ಪಕ್ಷವನ್ನು ಸ್ಥಾಪಿಸಿದ ಪೆರಿಯಾರ್, ಹಿಂದೂ ಧರ್ಮದ ವಿರುದ್ಧ ಉಗ್ರವಾದ ನಿಲುವನ್ನು ತಳೆದರು. ಅಂಬೇಡ್ಕರ್ ಅವರ ನಿಲುವುಗಳು ಮತ್ತಷ್ಟು ಸೂಕ್ಷ್ಮವಾದವು. ಅವರೂ ಹಿಂದೂ ಧರ್ಮವು ಉಳಿದಿರುವ ತನಕ ಜಾತಿ ಪದ್ಧತಿ ಅಳಿಯುವುದು ಸಾಧ್ಯವಿಲ್ಲ ಎಂದು ಭಾವಿಸುತ್ತಾರೆ. ಇದಕ್ಕೆ ಕಾರಣವೆಂದರೆ, ಜಾತಿ ಪದ್ಧತಿಯ ಸಮರ್ಥನೆಗಳು ಹಿಂದೂ ಧರ್ಮದ ಧಾರ್ಮಿಕ ಗ್ರಂಥಗಳಲ್ಲಿ (ಸೇಕ್ರೆಡ್ ಟೆಕ್ಸ್) ಇರುವುದು. ಆದರೆ ಬಾಬಾಸಾಹೇಬರು ಆಧುನಿಕತೆಯಿಂದ ರೂಪುಗೊಂಡ ಚಿಂತಕರಾದರೂ, ಪೆರಿಯಾರ್ ಅವರಿಗಿಂತ ಒಂದು ಬಹಳ ಮುಖ್ಯವಾದ ವಿಚಾರದಲ್ಲಿ ಭಿನ್ನರಾಗುತ್ತಾರೆ. ಪಶ್ಚಿಮದ 'ರ್ಯಾ ಶನಲಿಸ್ಟ್' ಪರಂಪರೆಯಿಂದ ಹೆಚ್ಚಾಗಿ ಪ್ರಭಾವಿತರಾದ ಪೆರಿಯಾರ್ ಧರ್ಮ ಮತ್ತು ಸಂಸ್ಕೃತಿಗಳ ನಡುವಣ ಸಂಬಂಧವನ್ನು ಸೂಕ್ಷ್ಮವಾಗಿ ಚಿಂತಿಸಲಿಲ್ಲ.ಇನ್ನೂ ಮುಖ್ಯವಾಗಿ ಆಧ್ಯಾತ್ಮಿಕತೆ (ಸ್ಪಿರಿಚ್ಯುಯಾಲಿಟಿ) ಎನ್ನುವುದು ಅವರಿಗೆ ಮುಖ್ಯವಾಗಲಿಲ್ಲ. ಕುತೂಹಲದ ವಿಷಯವೆಂದರೆ, ಕನ್ನಡದ ಪ್ರಗತಿಪರ ಚಿಂತನೆಯ ಮೇಲೆ ಪೆರಿಯಾರರ ಈ ಚಿಂತನೆಗಳ ಪ್ರಭಾವ ಒಂದು ಮಟ್ಟದವರೆಗೆ ಆಗಿದೆ. ಅಂಬೇಡ್ಕರ್ ಅವರು ಹಿಂದೂ ಧರ್ಮದ ಸುಧಾರಣೆಯ ಹೋರಾಟವನ್ನು 1930ರ ದಶಕದ ಮಧ್ಯಭಾಗದ ವೇಳೆಗೆ ಬಿಟ್ಟುಕೊಟ್ಟರು. ಜಾತಿ ವಿನಾಶಕ್ಕೆ ಮತಾಂತರವು ದಾರಿಯೆಂದು, ತಮಗೆ ಬೇಕಿರುವ ಧಾರ್ಮಿಕ ಪರ್ಯಾಯಗಳ ಹುಡುಕಾಟದಲ್ಲಿ ತೊಡಗಿದರು. ಈ ಹುಡುಕಾಟದಲ್ಲಿ ಅವರ ಆಧ್ಯಾತ್ಮಿಕ ಬದ್ಧತೆ ಸ್ಪಷ್ಟವಾಗುತ್ತದೆ. ಇಪ್ಪತ್ತು ವರ್ಷಗಳ ಚರ್ಚೆ, ಅಧ್ಯಯನ,

ಬರವಣಿಗೆಗಳ ನಂತರ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಅವರ ಆಯ್ಕೆ ಆಧ್ಯಾತ್ಮಿಕ ನೆಲೆಯಿಂದಲೇ ಪ್ರೇರಿತವಾದುದು.ಆಧ್ಯಾತ್ಮಿಕತೆಯ ಮಹತ್ವವನ್ನು ಗುರುತಿಸುವ ಮೂಲಕ ಪೆರಿಯಾರ್ ಅವರಿಗಿಂತ ಅಂಬೇಡ್ಕರ್ ಭಿನ್ನರಾಗುತ್ತಾರೆ.

ಜಾತಿಗಳು ಪ್ರಾಬಲ್ಯ ವಾಗಿರುವ ಕಾರಣಕ್ಕಾಗಿ; ಎಲ್ಲದರಲ್ಲೂ ರಾಜಿ ಮಾಡಿಕೊಂಡು ಆಡಳಿತ ನಡೆಸುವ ವ್ಯವಸ್ಥೆ ಸೃಷ್ಟಿಯಾಗುತ್ತಿದೆ. ಇಂಥ ವೈಪರೀತ್ಯಗಳು ತೀವ್ರ ರೀತಿಯಲ್ಲಿ ಜನಸಾಮಾನ್ಯರ ನಡುವೆ ಗಟ್ಟಿಯಾಗುತ್ತಿರುವ ಸಮಯದಲ್ಲಿ 'ಪೆರಿಯಾರ್', 'ನಾರಾಯಣ ಗುರು' ಮತ್ತು 'ಅಂಬೇಡ್ಕರ್' ರೀತಿಯಲ್ಲಿ ಸಾಮಾಜಿಕ ಅನಿಷ್ಟಗಳ ಬಗ್ಗೆ ಧ್ವನಿಯೆತ್ತುವ ಸಂತ ಸಮಾನರು ಬೇಕಾಗಿದೆ. ನೂರಾರು ವರ್ಷ ಗಳಿಂದ ಈ ರೀತಿಯಲ್ಲಿ ಮೂಢ ನಂಬಿಕೆಗಳನ್ನು ನಮ್ಮ ಸಂತ ಮಹನೀಯರು ವಿರೋಧಿಸುತ್ತಲೇ ಬಂದಿದ್ದಾರೆ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಪೆರಿಯಾರ್ ಅವರು ಎತ್ತಿದ ಕೂಗು ಅತ್ಯಂತ ಮಹತ್ವಪೂರ್ಣವಾದದ್ದು. ಮಾನವೀಯ ನೆಲೆಯಲ್ಲಿ ಅರ್ಥ ಪೂರ್ಣವಾದದ್ದು. ಭಾರತದ ಬಗ್ಗೆ ಬರೆದ ಪಾಶ್ಚಾತ್ಯ ಚಿಂತಕರ ಸಂದರ್ಭದಲ್ಲಿಯಾಗಲಿ, ಇಲ್ಲವೆ ಆಧುನಿಕತೆಯೊಡನೆ ಅನುಸಂಧಾನ ಮಾಡಬೇಕಾದ ಭಾರತೀಯ ಚಿಂತಕರಾಗಲಿ ಜಾತಿ ಪದ್ಧತಿ ಮತ್ತು ಹಿಂದೂ ಧರ್ಮದ ನಡುವಿನ ಸಂಬಂಧವನ್ನು ಗಂಭೀರವಾಗಿಯೇ ಅನ್ವೇಷಿಸಿದರು.

ಪಾಶ್ಚಾತ್ಯರು ಜಾತಿ ವ್ಯವಸ್ಥೆ ಮತ್ತು ಹಿಂದೂ ಧರ್ಮಗಳೆರಡೂ ಭಾರತೀಯ ನಾಗರಿಕತೆಯ 'ಸಾರ' (ಎಸ್ಸೆನ್ಸ್) ಎಂದು ನಂಬಿದ್ದರು. ಫ್ರೆಂಚ್ ಸಮಾಜಶಾಸ್ತ್ರಜ್ಞ ಲೂಯಿ ಡ್ಯೂಮೊ ಹೇಳುವಂತೆ, ಯಾವ ಪಾಶ್ಚಾತ್ಯ ವ್ಯಕ್ತಿಯೂ ಜಾತಿ ಪದ್ಧತಿಯ ಅಂತ್ಯವಾಗಬೇಕು ಎಂದು ವಾದಿಸಲಿಲ್ಲ. ಅದಕ್ಕೆ ಡ್ಯೂಮೊ ನೀಡುವ ಕಾರಣವೆಂದರೆ, ಪಾಶ್ಚಾತ್ಯರಿಗೆ ಭಾರತೀಯ ಸಮಾಜ ಮತ್ತು ನಾಗರಿಕತೆಗಳ ಕೇಂದ್ರದಲ್ಲಿ ಜಾತಿಯಿದೆ ಎನ್ನುವ ಅರಿವಿತ್ತು. ಜಾತಿ ವ್ಯವಸ್ಥೆಯ ಬಗೆಗಿನ ಇತ್ತೀಚಿನ ಚರ್ಚೆಗಳು ಹಲವು ಹೊಸ ಆಯಾಮಗಳನ್ನು ಪಡೆದುಕೊಂಡಿವೆ. ಜಾತಿಯೆನ್ನುವುದು ವಸಾಹತುಶಾಹಿ ಬೌದ್ಧಿಕತೆ ಭಾರತದ ಬಗ್ಗೆ ಸೃಷ್ಟಿಸಿದ ಕಥನ ಎನ್ನುವವರೂ ಕಾಣಸಿಗುತ್ತಾರೆ. ಇಷ್ಟಾದರೂ ಆಧುನಿಕ ಭಾರತದ ಸಾರ್ವಜನಿಕ ಜೀವನದಲ್ಲಿದ್ದ ಯಾವ ಪ್ರಮುಖ ವ್ಯಕ್ತಿತ್ವವೂ ಜಾತಿಯ ಪ್ರಶ್ನೆಯನ್ನು ನಿರ್ಲಕ್ಷಿಸುವಂತಿರಲಿಲ್ಲ. ಹಾಗೆಯೇ ಜಾತಿ ವ್ಯವಸ್ಥೆಯಲ್ಲಿ ಸುಧಾರಣೆ ಸಾಧ್ಯವೆ? ಜಾತಿ ವಿನಾಶ ಅಗತ್ಯವೆ? ಇದು ಹಿಂದೂ ಧರ್ಮದ ಚೌಕಟ್ಟಿನೊಳಗೆ ಮಾಡಲು ಸಾಧ್ಯವೆ? ಈ ಎಲ್ಲ ಪ್ರಶ್ನೆಗಳಿಗೂ ಸರಳವಾದ, ನೇರವಾದ ಉತ್ತರಗಳನ್ನು ನಮ್ಮ ಭಾರತೀಯ ಚಿಂತಕರು ನೀಡಿರಬಹುದು. ಆದರೆ ಅವು ಸೂಕ್ತವಾದ ಪರಿಹಾರಗಳೇ ಎನ್ನುವುದನ್ನು ಕಾಲ ಮಾತ್ರ ಉತ್ತರಿಸುತ್ತದೆ, ಅದು ಸಹ ಆಂಶಿಕವಾಗಿ ಮಾತ್ರ. ಪೆರಿಯಾರ್ ಕೇವಲ ಲೋಕಜ್ಞಾನಕ್ಕೆ ಮುಖಾಮುಖಿಯಾದ ಸಮಾಜ ವಿಜ್ಞಾನಿ ಮಾತ್ರ ಆಗಿರಲಿಲ್ಲ. ಅವರು ಮನುಷ್ಯ, ವಿಜ್ಞಾನದ ಮೂಲಕ, ಆವಿಷ್ಕಾರದ ಮೂಲಕ ಮುಂದೊಂದು ದಿನ ಅಸೀಮವಾದುದನ್ನೆ ಸಾಧಿಸಬಲ್ಲೆವು ಎನ್ನುವುದನ್ನ ವಿವರಿಸಿದ್ದರು. ಅವೆಲ್ಲವೂ ಇಂದು ನಮ್ಮೊಂದಿಗಿವೆ, ನಮ್ಮ ಆಧುನಿಕತೆಯ ಫಲಿತಗಳಾಗಿವೆ. ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣದೊಂದಿಗೆ ವೈಚಾರಿಕತೆ ಎನ್ನುವುದು ಹಾಸುಹೊಕ್ಕಾಗಿರುವುದನ್ನ ಅವರು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. "ಪಾಶ್ಚಾತ್ಯ ದೇಶಗಳಲ್ಲಿನ ಶಿಕ್ಷಣವು ಮುಖ್ಯವಾಗಿ ವೈಚಾರಿಕತೆಯನ್ನು, ವಿಜ್ಞಾನವನ್ನು, ಸಂಶೋಧನೆಯನ್ನು ಒಳಗೊಂಡಿದೆ. ಮಾತ್ರವಲ್ಲದೇ ಅವುಗಳಿಗೆ ಅನುಗುಣವಾಗಿಯೇ ಅಲ್ಲಿ ಶಿಕ್ಷಣವನ್ನ ನೀಡಲಾಗುತ್ತದೆ" ಎಂದು ಪೆರಿಯಾರ್

ಹೇಳಿದ್ದರು. ಮುಂದುವರೆದು "ಮತವನ್ನೋ ಧಾರ್ಮಿಕ ಸಂಬಂಧವಾದ ಭಕ್ತಿಯನ್ನೋ ಶಿಕ್ಷಣದಲ್ಲಿ ಅವರು ಕಡ್ಡಾಯವಾಗಿ ತಂದು ಹಾಕುವುದಿಲ್ಲ. ಪಾಶ್ಚಾತ್ಯ ವಿದ್ಯಾವಂತನು ಒಬ್ಬ ವಿಚಾರವಾದಿಯೋ, ಲೋಕಾನುಭವುಳ್ಳವನಾಗಿಯೋ, ಒಬ್ಬ ವಿಜ್ಞಾನಿಯಾಗಿಯೂ, ಒಬ್ಬ ಸಂಶೋಧಕನಾಗಿಯೂ ಇರುತ್ತಾನೆ ಹೊರತಾಗಿ ಎಂದಿಗೂ ಧರ್ಮಗುರುವಾಗಿಯೋ ಮೂಢನಂಬಿಕೆಯುಳ್ಳವನಾಗಿಯೋ, ವೇದಾಂತಿಯಾಗಿಯೋ, ಪರಮತ ವೈರಿಯಾಗಿಯೋ ಸಂಕುಚಿತ ಬುದ್ಧಿಯುಳ್ಳವನಾಗಿಯೋ ಇರುವುದಿಲ್ಲ" (ಪೆರಿಯಾರ್, ಡಾ. ಎಸ್. ವೇಲುಸ್ವಾಮಿ. (ಅನು) ಶ್ರೀ ಕೃಷ್ಣಭಟ್ ಅರ್ತಿಕ ಜೆ. ಪು.7) ಈ ಬಗೆಯ ವಸ್ತುನಿಷ್ಠವಾದ ಚಿಂತನೆಗಳೇ ಪೆರಿಯಾರ್ ಅವರನ್ನ ವರ್ತಮಾನಕ್ಕೆ ನಿರಂತರ ಮುಖಾಮುಖಿಯಾಗಿಸುವ ತುರ್ತನ್ನು ಹೇಳುವಂತಹುದು.

**ಪರಾಮರ್ಶನ ಗ್ರಂಥಗಳು**


- ಉಷಾ. ಎಂ. (ವರ್ಷ). 'ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪ್ಪ. ಸಿ. (2018). ದ್ರಾವಿಡ ಚೇತನ ಪೆರಿಯಾರ. ಬೋಧಿವೃಕ್ಷ ಪ್ರಕಾಶನ, ಬೆಂಗಳೂರು.
- ಚಂದ್ರ ಭಾರಿಲ್. (1981). 'ಸೋಷಿಯಲ್ ಅಂಡ್ ಪಾಲಿಟಿಕಲ್ ಐಡಿಯಾಸ್ ಆಫ್ ಬಿ.ಆರ್. ಅಂಬೇಡ್ಕರ್', ಜೈಪುರ.
- ಜೆರಾಲ್ಡಿನ್ ಫೋರ್ಬ್ಸ್, 'ಶ್ರೀಮತಿ ಎಚ್.ಎಸ್.(ಅನು) (2001) ಆಧುನಿಕ ಭಾರತದಲ್ಲಿ ಮಹಿಳೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ದಯನಾಂದ ಮಾನೆ. (1956).** 'ದಿ ಪೋಲಿಟಿಕಲ್ ಎಲೈಟ್ ಅಮನಗ್ ದಿ ಸೆಡ್ಯೂಲ್ಡ್ ಕಾಸ್ಟ್ಸ ಇನ್ ಕರ್ನಾಟಕ ಸಿನ್ಸ್ (1956) ಅನಾಲಿಸಿಸ್, ಅಪ್ರಕಟಿತ (ಪಿ.ಎಚ್.ಡಿ ಪ್ರಬಂಧ) ಕರ್ನಾಟಕ ವಿ.ವಿ ಧಾರವಾಡ.
- ಪೆರಿಯಾರ್ (ಅನು), ಮಾಯಿಗೌಡ ಕೆ, 'ಪೆರಿಯಾರ್ ಕ್ರಾಂತಿ ಕಿಡಿ,' (2014). ಸಪ್ನ ಬುಕ್ ಹೌಸ್, ಬೆಂಗಳೂರು.
- ಪೆರಿಯಾರ್ (ಅನು), ಸುಜ್ಞಾನಮೂರ್ತಿ ಬಿ. (2016). 'ಅಸ್ಪೃಶ್ಯತೆ ವೈಕಂ ಸತ್ಯಗ್ರಹ', ಲಡಾಯಿ ಪ್ರಕಾಶನ, ಗದಗ.
- ಪೆರಿಯಾರ್ (ಅನು), ಸುಜ್ಞಾನಮೂರ್ತಿ. ಬಿ. (2016). ಸ್ವಾಭಿಮಾನದ ಮದುವೆಗಳು', ಲಡಾಯಿ ಪ್ರಕಾಶನ, ಗದಗ.
- ಬೈರಪ್ಪ. ಕೆ. 'ಭಾರತೀಯ ಸಮಾಜ ಅಧ್ಯಯನ ಮತ್ತು ಸಮಾಜೀಕ ಸಂರಚನೆ', (2016). ಪ್ರಕಾಶಕರು ಎಸ್.ಬಿ.ಎಸ್. ಪಬ್ಲಿಷರ. ಬೆಂಗಳೂರು.